**ದಿನಾಂಕ: 23-09-2015 ರಂದು ಉಪನಿರ್ದೇಶಕರು(ಆಡಳಿತ), ಮಂಡ್ಯ ಜಿಲ್ಲೆ ಇಲ್ಲಿ ನಡೆದ ಶಿಕ್ಷಣ ಅದಾಲತ್‌ನಲ್ಲಿ ಕೇಳಕಂಡಂತೆ ಮನವಿ ಸಲ್ಲಿಸಿರುತ್ತಾರೆ, ಅದಕ್ಕೆ ನೀಡಿದ ಸೂಚನೆಗಳನ್ನು ದಾಖಲಿಸಲಾಗಿದೆ.**

1. ಶ್ರೀ ಸೋಮಶೇಖರ್ ಸಹ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ ಮುದಗಂದೂರು, ಈ ಹಿಂದೆ ಇಲಾಖಾ ವಿಚಾರಣೆ ನಡೆಸಿ ಆರೋಪಗಳ ಪ್ರಕಾರ ವಸೂಲಿಯಾಗಿರುವ ಹಣ ಹಿಂದಕ್ಕೆ ಕೊಡಿಸಬೇಕೆಂದು ಕೇಳಿರುತ್ತಾರೆ.

ಉತ್ತರ :- ಈ ಪ್ರಕರಣದಲ್ಲಿ ಈಗಾಗಲೇ ವಿಚಾರಣೆ ಜರುಗಿ ಅಂತಿಮ ಆದೇಶ ಪ್ರಕಟವಾಗಿರುತ್ತದೆ. ಇದು 2008ಕ್ಕೆ ಸಂಬಂಧಿಸಿದ ವಿಷಯ. ಭಾದಿತರಾದ ಶಿಕ್ಷಕ ಶ್ರೀ ಸೋಮಶೇಖರ್ ಇವರಿಗೆ ಅಪೀಲು ಪ್ರಕ್ರಿಯೆಯನ್ನು ಪಾಲಿಸಲು ಸ್ಥಳದಲ್ಲಿಯೇ ಸೂಚನೆ ನೀಡಲಾಗಿದೆ ಒಂದು ವೇಳೆ ಅಪೀಲು ಅವಧಿ ಮುಕ್ತಾಯವಾಗಿದ್ದಲ್ಲಿ ಸೂಕ್ತ ನ್ಯಾಯಾಧೀಕರಣದಲ್ಲಿ ತನ್ನ ಅಹವಾನ್ನು ಮಂಡಿಸಬಹುದೆಂದು ಅದಾಲತ್‌ನಲ್ಲಿ ತಿಳಿಸಲಾಗಿದೆ.
ಕ್ರಮ:- ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ

2. ಶ್ರೀಮತಿ ಪ್ರಭಾವತಿ ಕೋಂ ಲೇಟ್ ಜಿ ಪಿ ಲಿಂಗರಾಜು, :- ಶ್ರೀ ಲಿಂಗರಾಜು ಇವರು ದಿನಾಂಕ: 19-9-2013 ರಂದು ನಿಧನರಾಗಿದ್ದು ಅವರ ಪತ್ನಿ ಶ್ರೀಮತಿ ಪ್ರಭಾವತಿ ಇವರಿಗೆ ತನ್ನ ಗಂಡನು ಸೇವೆಯಲ್ಲಿದ್ದಾಗ ನಿಧನ ಹೊಂದಿರುವುದರಿಂದ ಕಾನೂನು ರೀತ್ಯ ಬರಬೇಕಾದ 116 ದಿನಗಳ ಗಳಿಕೆ ರಜೆಯ ನಗದೀಕರಣದ ಬಾಬ್ತು ಹಣವನ್ನು ಕೊಡಿಸಿಕೊಡಲು ಕೇಳಿರುತ್ತಾರೆ.

ಉತ್ತರ :- ಈ ಪ್ರಕರಣ 2013 ರಿಂದ ಬಾಕಿ ಇದೆ. ಪದೇ ಪದೇ ಮಂಡ್ಯದಿಂದ ಡಿ.ಎಸ್.ಇ.ಆರ್.ಟಿ ಗೆ ಮತ್ತು ಅಲ್ಲಿಂದ ಉತ್ತರ ಡಯಟ್‌ಗೆ ಪತ್ರ ವ್ಯವಹಾರ ಮಾಡಿದೆ. ಹಾಗಿದ್ದರೂ ಕೂಡ ಈ ಪ್ರಕರಣ ಇತ್ಯರ್ಥಗೊಂಡಿರುವುದಿಲ್ಲ. ದಿವಂಗತ ಲಿಂಗರಾಜು ಜಿ.ಪಿ. ಇವರ ಕೆಲವು ಸೇವಾ ದಾಖಲಾತಿಗಳು ಗುಲ್ಬರ್ಗಾ ಅಪರ ಆಯುಕ್ತರಲ್ಲಿಯೂ ಇನ್ನುಳಿದ ಅಂಶಗಳು ಮಹಾಲೇಖಪಾಲರಲ್ಲಿ ಇದೇ ಎಂಬುದಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಇದರ ಬಗ್ಗೆ ಶಿಕ್ಷಣ ಆಯುಕ್ತರ ಕಛೇರಿಯಿಂದ ಪುನ: ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಹಾಗೂ ದಿನಾಂಕ: 5-10-2015 ರಂದು ಆಯುಕ್ತರ ಹಂತದಲ್ಲಿ ಪುನರ್ ಪರಿಶೀಲನೆ ನಡೆಸಲಾಗುವುದು. ಕ್ರಮ : ಆಯುಕ್ತರ ಕಛೇರಿಯ ಆಪ್ತ ಶಾಖೆ (ಶ್ರೀಮತಿ ಪ್ರಭಾವತಿ ಕೋಂ ದಿ|| ಜಿ.ಪಿ. ಲಿಂಗರಾಜು ರವರ ಮೊಬೈಲ್ ಸಂ: 9845875030)

ಅದಾಲತ್‌ನಲ್ಲಿ ಹಾಜರಿದ್ದ ಶ್ರೀಮತಿ ಪ್ರಭಾವತಿ ರವರು ತಮಗೆ ಹಾಲಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಅನುಕಂಪದ ಆಧಾರದ ಮೇಲೆ ಗ್ರೂಪ್ "ಡಿ" ಹುದ್ದೆಗೆ ಸೇರಲು ಇಚ್ಛೆ ಇಲ್ಲ, ಹಾಗೂ ನನ್ನ ಮಗ ಬಿ.ಇ. ವ್ಯಾಸಂಗ ಮಾಡುತ್ತಿದ್ದಾನೆ, ಆತನನ್ನೂ ಸಹಾ ಅನುಕಂಪದ ಆಧಾರದ ಹುದ್ದೆಗೆ ಕಳುಹಿಸಿರುವ ಮನಸ್ಥಿತಿಯಲ್ಲಿ ಇಲ್ಲ. ಆದ್ದರಿಂದ, ಕೇವಲ ಗಳಿಕೆ ರಜೆಯ ನಗದೀಕರಣದ ವಿಚಾರಣವನ್ನು ಮಾತ್ರ ಪರಿಶೀಲಿಸಿ ಅನುಕೂಲ ಮಾಡಿಕೊಡಬೇಕೆಂದು ಕೇಳಿರುತ್ತಾರೆ. (ಕ್ರಮ: ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ)

3. ಶ್ರೀ ಕೃಷ್ಣ ಕುಮಾರ್ ಎಸ್. ಸ.ಶಿ. ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲೆ ವಿಭಾಗ) ಕೆ.ಆರ್.ಎಸ್. ಮಂಡ್ಯ ಜಿಲ್ಲೆ ಇವರು ಪರಸ್ಪರ ವರ್ಗಾವಣೆಗೆ ಘಟಕ ಒಳಗೆ ಅರ್ಜಿ ಸಲ್ಲಿಸಿದ್ದಾರೆ. ಈಗಾಗಲೇ ದಿ: 10-8-15 ರಂದು ಕೌನ್ಸೆಲಿಂಗ್ ಹಾಜರಾಗಿದ್ದಾರೆ. ಇವರು ಹಿಂದೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಲ್ಲಿದ್ದು ದಿ: 23-11-2006ರಲ್ಲಿ ಪ್ರೌಢಶಾಲಾ ಶಿಕ್ಷಕರ ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ. ಇವರ ಪರಸ್ಪರ ವರ್ಗಾವಣಾ ಅರ್ಜಿಯನ್ನು ತಡೆಹಿಡಿಯಲಾಗಿದೆ ಎಂಬ ಹಿಂಬರಹದ ಬಗ್ಗೆ ಪರಿಶೀಲಿಸಲು ಮನವಿ ನೀಡಿದ್ದಾರೆ.

**ಉತ್ತರ** :- ಶ್ರೀ ಎಸ್. ಕೃಷ್ಣ ಕುಮಾರ್ ಇವರ ಮನವಿಯನ್ನು ಪರಿಗಣಿಸಲಾಗಿದೆ. ಇವರು ಕೌನ್ಸೆಲಿಂಗ್‌ನಲ್ಲಿ ಪಡೆದ ಸ್ಥಳಕ್ಕೆ ವರ್ಗಾವಣಾ ಆದೇಶವನ್ನು ತಕ್ಷಣವೇ ಹೊರಡಿಸಬೇಕೆಂದು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ ಸೂಚನೆ ನೀಡಲಾಗಿದೆ. (ಕ್ರಮ : ಜಂಟಿ ನಿರ್ದೇಶಕರು, ಮೈಸೂರು ವಿಭಾಗ)

**1) ಅನುಕಂಪದ ಆಧಾರದ ಮೇಲೆ ನೌಕರಿ ನೀಡುವ ಪ್ರಸ್ತಾವನೆಗಳು :-**

ಮಂಡ್ಯ ಜಿಲ್ಲೆಯಲ್ಲಿ ಇಂದಿನ ದಿನಾಂಕಕ್ಕೆ ಒಟ್ಟು 24 ಪ್ರಕರಣಗಳು ವಿವಿಧ ಹಂತಗಳಲ್ಲಿ ಇರುತ್ತವೆ. ಆಯುಕ್ತರ ಕಛೇರಿ ಹಂತದಲ್ಲಿ ಬಾಕಿ ಇರುತ್ತವೆ.

**2) ಹೆಚ್.ಆರ್.ಎಂ.ಎಸ್. ಪ್ರಕರಣ:**

ಈಗಾಗಲೇ ನೀಡಿದ ಸೂಚನೆ ಮತ್ತು ಸುತ್ತೋಲೆಗಳಂತೆ ಪ್ರತಿಯೊಬ್ಬ ವೇತನ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ ತನ್ನ ಹಂತದಲ್ಲಿ ಹೆಚ್.ಆರ್.ಎಂ.ಎಸ್. ಅಂಕಿ-ಅಂಶಗಳನ್ನು - ನೌಕರರ ಹೆಸರು, ಪದನಾಮವನ್ನು ಪರಿಶೀಲಿಸಿ ಸರಿಪಡಿಸಬೇಕು. ಆರ್ಥಿಕ ಇಲಾಖೆಯು ನೌಕರರ ಸಂಬಳ ಬಟವಾಡೆಗಾಗಿ ಹೆಚ್.ಆರ್.ಎಂ.ಎಸ್. ತಂತ್ರಾಂಶವನ್ನು ಅವಲಂಬಿಸಿದೆ. ಯಾವ ತಾಲ್ಲೂಕಿನಲ್ಲಿ ಹೆಚ್.ಆರ್.ಎಂ.ಎಸ್. ಸರಿಯಿಲ್ಲವೋ ಅಲ್ಲಿ ವೇತನ ಪಾವತಿ ಸಮಸ್ಯೆಯಾಗಿದೆ. ಇದರಲ್ಲಿ ಮೃತರಾದವರುಗಳ ಹೆಸರುಗಳಿವೆ, ಮುಂಬಡ್ತಿ ಹೊಂದಿದವರ ಹೆಸರುಗಳಿವೆ, ಜಿಲ್ಲೆಯಿಂದ ಹೊರಗಡೆ ವರ್ಗಾವಣೆ ಹೊಂದಿದವರ ಹೆಸರುಗಳಿವೆ ನಿವೃತ್ತಿಯಾದವರುಗಳ ಹೆಸರುಗಳಿವೆ ಆದ್ದರಿಂದ, ಇಡೀ ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿ/ನೌಕರರ ಹೆಚ್.ಆರ್.ಎಂ.ಎಸ್. ಡಾಟವನ್ನು ಪೂರ್ಣ ಪ್ರಮಾಣದಲ್ಲಿ ಪರಿಶೀಲನೆ ಮಾಡಿ ಸರಿಪಡಿಸುವ ಜವಾಬ್ದಾರಿಯನ್ನು ಡಿಡಿಪಿಐ ಮಂಡ್ಯ ಇವರಿಗೆ ವಹಿಸಲಾಗಿದೆ. ಈ ಕಾರ್ಯವನ್ನು ಪ್ರತೀ ತಿಂಗಳು ಡಿಡಿಪಿಐ ಹಂತದಲ್ಲಿ ಪರಿಶೀಲನಾ ಸಭೆ ನಡೆಸಿ ಪ್ರತೀ ತಿಂಗಳು ಇದನ್ನು ಪರಿಶೀಲಿಸಬೇಕು.

**3) ವೇತನ ತಾರತಮ್ಯ ಪ್ರಕರಣ :-**

8 ಪ್ರಕರಣಗಳು ಬಾಕಿ ಇವೆ. ಈ 8 ಪ್ರಕರಣಗಳನ್ನು ಜಿಲ್ಲಾ ಉಪನಿರ್ದೇಶಕರು ಪಟ್ಟಿ ಮಾಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿ ದಿನಾಂಕ: 15-10-2015ರೊಳಗಾಗಿ ಶಿಕ್ಷಣ ಆಯುಕ್ತರಿಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ.

4) <u>ರಜಾ ಅವಧಿಯಲ್ಲಿ ಗಣತಿ ಕಾರ್ಯ ನಿರ್ವಹಿಸಿದ ಅವಧಿಗೆ ಗಳಿಕೆ ರಜೆ ಲೆಕ್ಕಕ್ಕೆ ನೀಡುವ ಬಗ್ಗೆ</u>

ಸರ್ಕಾರದ ಆದೇಶ/ಸುತ್ತೋಲೆ ಪ್ರಕಾರ ಶಿಕ್ಷಕರಿಂದ ಗಣತಿ ಕಾರ್ಯ ನಿರ್ವಹಿಸಿದ ಬಗ್ಗೆ ಹಾಜರಾತಿ ಪ್ರಮಾಣ ಪತ್ರ ಪಡೆದು ಸೇವಾವಹಿಯಲ್ಲಿ ನಮೂದಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಯಿತು.

5) <u>ಸೇವಾವಹಿಯಲ್ಲಿ ನಾಮನಿರ್ದೇಶನ ಮಾಡಬೇಕಾದ ಬಾಕಿ ಪ್ರಕರಣಗಳು :-</u>

ಈ ವಿಚಾರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗಮನಹರಿಸಿಲ್ಲ. ಹೆಚ್ಚಿನ ಕಾರ್ಯ ಬಾಹುಳ್ಯವನ್ನು ಕಛೇರಿಯ ವ್ಯವಸ್ಥಾಪಕರಿಗೆ ವಹಿಸಿದ್ದಾರೆ. ದಿನಾಂಕ: 10-10-2015ರೊಳಗಾಗಿ ಪೂರ್ಣ ಕಾರ್ಯವನ್ನು ಮುಗಿಸಿ ವರದಿಯನ್ನು ಸಲ್ಲಿಸಲು ಉಪನಿರ್ದೇಶಕರಿಗೆ ತಿಳಿಸಲಾಗಿದೆ. ಅದೇ ರೀತಿ ಶಿಕ್ಷಣ ಅದಾಲತ್‌ನಲ್ಲಿ ಹಾಜರಿದ್ದ ಜಂಟಿ ನಿರ್ದೇಶಕರು, ಮೈಸೂರು ವಿಭಾಗ, ರವರು ಮೇಲ್ವಿಚಾರಣೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಯಿತು.

6) <u>ನಿವೃತ್ತಿ ವೇತನ ಮಂಜೂರಾತಿ ಬಾಕಿ ಪ್ರಕರಣಗಳು :-</u>

6 ಪ್ರಕರಣಗಳು ಬಾಕಿ ಇವೆ. ಇದರಲ್ಲಿ ಒಂದು ಶ್ರೀ ಡಿ.ಎಂ. ಶಿವರಾಮು, ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ದುದ್ದ, ಇವರ ಮರಣದ ಕಾರಣ ಇಡುಗಂಟು ಮಂಜೂರಾತಿ ಕೋರಿ ದಿನಾಂಕ: 12-8-2015 ರಿಂದ ಆಯುಕ್ತರ ಕಛೇರಿಯಲ್ಲಿ ಬಾಕಿ ಇದೆ. ಇಡುಗಂಟು ಬಾಕಿ ಮಂಜೂರಾತಿ ಆದೇಶ ಆಯುಕ್ತರ ಕಛೇರಿಯಲ್ಲಿ ಬಾಕಿ ಇದೆ. (ಕ್ರಮ :- ಆಯುಕ್ತರು)

7) <u>ಪಠ್ಯ ಪುಸ್ತಕ ವಿತರಣೆ :-</u>

2016-17ನೇ ಸಾಲಿಗೆ ಉಚಿತ ಪಠ್ಯಪುಸ್ತಕ ಬೇಡಿಯನ್ನು ಕರಾರುವಕ್ಕಾಗಿ ನೀಡಬೇಕು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಶೇಕಡಾ 5 ಬಫರ್ ಹೆಚ್ಚುವರಿ ಕೊಡಬಾರದು. ಇದಕ್ಕೆ ಕಾರಣವೇನೆಂದರೆ 2016-17ನೇ ಸಾಲಿನ ಪಠ್ಯಪುಸ್ತಕಗಳನ್ನು ಮುಂದಿನ ವರ್ಷಗಳಿಗೆ ನೀಡುವುದಿಲ್ಲ. ಅಂದರೆ, ಪಠ್ಯಪುಸ್ತಕವನ್ನು ಪರಿಷ್ಕರಿಸಲಾಗುತ್ತಿದೆ. ಯಾವುದೇ ಹೆಚ್ಚುವರಿ ಪುಸ್ತಕ ವಿದ್ಯಾರ್ಥಿಗಳಿಗೆ ಹಂಚದೆ ಶಾಲೆಯಲ್ಲಿ ಉಳಿದರೆ ಅದು ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಅದೇ ರೀತಿ ಈ ಹಿಂದಿನ ಸಾಲುಗಳಲ್ಲಿ ಅಂದರೆ, 2010-11 ರಿಂದ ಇದುವರೆಗೆ ನೀಡಿದ ಉಚಿತ ಹಾಗೂ ಮಾರಾಟದ ಪಠ್ಯಪುಸ್ತಕಗಳ ಲೆಕ್ಕವನ್ನು ಆಡಿಟ್ ಮಾಡಿಸಿಲ್ಲ. ಇದು ಆಕ್ಷೇಪಾರ್ಹ. ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇದನ್ನು ಅತೀ ತುರ್ತಾಗಿ ಆಡಿಟ್ ಮಾಡಿಸುವುದು, ಇಲ್ಲವಾದಲ್ಲಿ ಮುಂದೆ ಒದಗಬಹುದಾದ ಆರ್ಥಿಕ ಸಂಕಷ್ಟಗಳಿಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ನೇರ ಜವಾಬ್ದಾರರು ಎಂದು ತಿಳಿಯುವುದು.

ಕೆಲವು ಶಾಲೆಗಳಲ್ಲಿ ದಾಖಲಾತಿಯನ್ನು ತೋರಿಸಿ ಹೆಚ್ಚು ಪುಸ್ತಕವನ್ನು ತೆಗೆದುಕೊಳ್ಳಲಾಗಿದೆ. ಇದು ಮುಖ್ಯಶಿಕ್ಷಕರ ವಶದಲ್ಲಿದೆ. ಇದನ್ನು ಪರಿಶೀಲಿಸಿಲ್ಲ, ಇದು ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಣ ಸಂಯೋಜಕರ ಹೊಣೆಗಾರಿಕೆ. ಇದರಲ್ಲಿ ತಪ್ಪುಗಳಾದರೆ ಮುಖ್ಯಶಿಕ್ಷಕರು ಮತ್ತು ಶಿಕ್ಷಣ ಸಂಯೋಜಕರ ವೇತನದಲ್ಲಿ ಕಟಾಯಿಸಲಾಗುವುದು.

8) **ಉಚಿತ ಸಮವಸ್ತ್ರ :-**

ಹೆಚ್ಚುವರಿಯಾಗಿ ಉಳಿದಿರುವ ಉಚಿತ ಸಮವಸ್ತ್ರಗಳನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಯಿತು. ಫಲಾನುವಿಗಳ ಸಂಖ್ಯೆ: 122180 ಹಿಂದಿನ ಬಾಕಿ 42803, ಸರಬರಾಜು 88746, ವಿತರಣೆ 122180, ಉಳಿಕೆ 9369 ಸೆಟ್ಟುಗಳು. ಇದು ಆಕ್ಷೇಪಾರ್ಹ. ಮುಂದಾಲೋಚನೆ ಇಲ್ಲದೆ ಕ್ಷೇತ್ರ ಪರಿಶೀಲನೆ ಇಲ್ಲದೆ ಆಗಿರುವ ತಪ್ಪು. ಇದರ ಕುರಿತಾಗಿ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತುಉಪನಿರ್ದೇಶಕರುಗಳು ಉಳಿಕೆ ಸಮವಸ್ತ್ರವನ್ನು ಸರಿಯಾಗಿ ಪ್ಯಾಕ್ ಮಾಡಿ ಶೇಖರಿಸಿಡಲು ಹಾಗೂ 2016-17ನೇ ಸಾಲಿಗೆ ಬೇಡಿಕೆ ಸಲ್ಲಿಸುವಾಗ ಖಚಿತ ಮಾಹಿತಿಯನ್ನು ನೀಡಲು ಸೂಚಿಸಲಾಗಿದೆ.

9) **ಉಚಿತ ಬೈಸಿಕಲ್ ವಿತರಣೆ :-**

16998 ಬೈಸಿಕಲ್ ಸರಬರಾಜಾಗಿದೆ. ಅವುಗಳಲ್ಲಿ 12735 ವಿತರಣೆಯಾಗಿದೆ. ಉಳಿದಂತೆ 2263 ಕೆ.ಆರ್.ಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ವಿತರಣೆಯಾಗಿಲ್ಲ. ಇದಕ್ಕೆ ಕಾರಣ ಬೈಸಿಕಲ್‌ಗಳ ಸರಿಯಾದ ಜೋಡಣೆಯಾಗಿಲ್ಲ ಎಂಬುದು. ಈ ಕುರಿತು ಆಯುಕ್ತರು ಹಂತದಲ್ಲಿ ಪರಿಶೀಲನಾ ಸಭೆ ನಡೆಸಿ ಬೈಸಿಕಲ್ ಸರಬರಾಜು ಮಾಡಿದ ಸಂಸ್ಥೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರಿಗೆ ಸೂಕ್ತ ಸೂಚನೆ ನೀಡಲಾಗುವುದು ಎಂದು ಆಯುಕ್ತರು ತಿಳಿಸಿದರು. (ಕ್ರಮ: ಆಯುಕ್ತರು)

10) **ಅಕ್ಷರ ದಾಸೋಹ :-**

ಯೂನಿಸೆಫ್ ವತಿಯಿಂದ ನಡೆಯುವ ತರಬೇತಿಗೆ ಅಕ್ಷರ ದಾಸೋಹ ಅಡುಗೆಯವರನ್ನು ನಿಯೋಜಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಯಿತು.

11) **ವರ್ಗಾವಣೆಗೊಂಡ ಶಿಕ್ಷಕರ ವಿವರ : -**

ವರ್ಗಾವಣೆಗೊಂಡ ಯಾರೇ ಅಧಿಕಾರಿ/ಶಿಕ್ಷಕರು/ಸಿಬ್ಬಂದಿ ವರ್ಗದವರಾಗಲೀ ಅವರನ್ನು ಆ ಶಾಲೆ/ಕಛೇರಿಯಲ್ಲಿ ಮುಂದುವರೆಸುವಂತಿಲ್ಲ. ಇದು ನಿಯಮ ಬಾಹಿರ. ವರ್ಗಾವಣೆ ಆದೇಶ ಜಾರಿಗೊಳಿಸಿದ ನಂತರ ಯಾವುದೇ ಕಾರಣಕ್ಕೂ ಅದೇ ಸ್ಥಳದಲ್ಲಿ ಮುಂದುವರೆಸುವಂತಿಲ್ಲ. ಅವರನ್ನು ವರ್ಗಾವಣೆಗೊಂಡ ಸ್ಥಳಕ್ಕೆ ಹಾಜರಾಗುವಂತೆ ತಿಳಿಸಿ ಕರ್ತವ್ಯದಿಂದ ಬಿಡುಗಡೆ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಯಿತು. ಶಾಲೆಗಳಿಗೆ ಶಿಕ್ಷಕರನ್ನು ಅನ್ಯ ಉದ್ದೇಶಗಳಿಗೆ ನಿಯೋಜಿಸುವಂತಿಲ್ಲ. ಸಕಾರಣ ನೀಡಿ ಪ್ರಾಧಿಕಾರದ ಅನುಮತಿ ಪಡೆದು ಅತ್ಯಂತ ಅವಶ್ಯಕತೆ ಇದ್ದಲ್ಲಿ ಮಾತ್ರ ಶಿಕ್ಷಕರ ನಿಯೋಜನೆ ಮಾಡುವುದು. ಕಾನೂನು ಪ್ರಕಾರ ಇದ್ದಲ್ಲಿ ಮಾತ್ರ ನಿಯೋಜನೆ ಮಾಡುವುದು. ಶಿಕ್ಷಕರ ಹಿತದೃಷ್ಠಿಯಿಂದ ಯಾವುದೇ ನಿಯೋಜನೆಗಳನ್ನು ಮಾಡುವಂತಿಲ್ಲ.

12) **ಹೆಚ್ಚುವರಿ ಶಿಕ್ಷಕರ ಸ್ಥಳಾಂತರ :-**

ಜಿಲ್ಲೆಯ ಎಲ್ಲಾ ಶೈಕ್ಷಣಿಕ ಬ್ಲಾಕ್‌ಗಳಲ್ಲಿ ಪ್ರಾಥಮಿಕ ಶಾಲೆ – ಮಾಧ್ಯಮಿಕ ಶಾಲೆ – ಪ್ರೌಢಶಾಲೆಗಳಲ್ಲಿ ಮೊದಲಿನಿಂದಲೂ ಮಂಜೂರಾದ ಶಾಲಾ ಶಿಕ್ಷಕರ ಹುದ್ದೆಯನ್ನು ಶಾಲಾವಾರು ಪಟ್ಟಿ ಮಾಡಬೇಕು.

ಪ್ರತಿಯೊಂದು ಮಂಜೂರಾತಿ ಆದೇಶವನ್ನು ಹುಡುಕಿ ಒಂದು ಪ್ರತ್ಯೇಕ ಕಡತದಲ್ಲಿಟ್ಟು ಶಾಲಾವಾರು ನಿರ್ವಹಿಸಬೇಕು.

ಕೆಲವು ಶಿಕ್ಷಕರ ಹುದ್ದೆಗಳು ವರ್ಗಾವಣೆಯಾದಾಗ ಹುದ್ದೆ ಸಹಿತ ಸ್ಥಳಾಂತರಿಸಲಾಗಿರುತ್ತದೆ. ಅದನ್ನು ಬೇರೆ ತಾಲ್ಲೂಕುಗಳಿಗೆ ವರ್ಗಾಯಿಸಲ್ಪಟ್ಟರೆ ಆಗ ಲೆಕ್ಕಾಚಾರವನ್ನು ಕೂಡಿ ಕಳೆಯುವ ರೀತಿಯಲ್ಲಿ ಅನುಸರಿಸಬೇಕು.

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದ್ದು ಶಾಲೆಯು ಶೂನ್ಯ ಶಾಲೆಯೆಂದು ಪರಿಗಣಿಸಲ್ಪಟ್ಟರೆ ಸತತವಾಗಿ 3 ವರ್ಷಗಳ ಕಾಲ ವಿದ್ಯಾರ್ಥಿಗಳು ಸೇರ್ಪಡೆಯಾಗದಿದ್ದರೆ ಅದನ್ನು ಖಾಯಂ ನೆಲೆಗಟ್ಟಿನಲ್ಲಿ ಶೂನ್ಯ ಶಾಲೆಯೆಂದು ಪರಿಗಣಿಸಿ ಹಿಂದೆ ಮಂಜೂರಾಗಿದ್ದ ಹುದ್ದೆಯನ್ನು ಖಾಯಂ ಆಗಿ ಸ್ಥಳಾಂತರಿಸಬೇಕು. ಇಂತಹ ಎಲ್ಲಾ ಆದೇಶಗಳನ್ನು ಹುಡುಕಿಸಿ - ಪರಿಶೀಲಿಸಿ - ಶೇಖರಿಸಿ - ಒಂದು ಪುಸ್ತಕದ ರೂಪದಲ್ಲಿ ಬೈಂಡ್ ಮಾಡಿಸಿ ಶಾಲಾವಾರು, ಕ್ಲಸ್ಟರ್‌ವಾರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿವಾರು ನಿರ್ವಹಿಸಲೇಬೇಕಾದ ಅಗತ್ಯತೆ ಹಾಗೂ ಅನಿವಾರ್ಯತೆ ಇದೆ. ಇದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ಖುದ್ದು ಆಸಕ್ತಿ ವಹಿಸಿ ವಾರಕ್ಕೊಮ್ಮೆಯಾದರೂ ಪ್ರಗತಿ ಪರಿಶೀಲನೆ ಮಾಡಿ ಸರಿಪಡಿಸಲೇಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ಆಯುಕ್ತರು ನೇರ ಶಬ್ದಗಳಲ್ಲಿ ಸೂಚಿಸಿ ಆದೇಶಿಸಿರುತ್ತಾರೆ.

**<u>ಅಗತ್ಯವಾಗಿ ಪಾಲಿಸಬೇಕಾದ ಸೂಚನೆಗಳು:</u>**

1. ಸೇವಾಪುಸ್ತಕಗಳನ್ನು ಅಪ್‌ಡೇಟ್ ಮಾಡಬೇಕು
2. ನಾಮನಿರ್ದೇಶನವನ್ನು ಅಂತ್ಯಗೊಳಿಸಬೇಕು
3. ಹುದ್ದೆಗಳ ಸಂಖ್ಯೆಯನ್ನು ಕರಾರುವಕ್ಕಾಗಿ ಗುರುತಿಸಬೇಕು.
4. ನ್ಯಾಯಾಲಯ ಪ್ರಕರಣಗಳಿಗೆ ವ್ಯಾಜ್ಯ ನಡೆಸುವ ಅಧಿಕಾರಿ(Litigation conducting officer) ನೇಮಕಾತಿ ಮಾಡಬೇಕು.
5. ನಗದು ಪುಸ್ತಕವನ್ನು ಬರೆದಿರುವುದನ್ನು ಪರಿಶೀಲಿಸಬೇಕು
6. ಎಲ್ಲಾ ಶಾಲೆಗಳ ಜಮೀನು–ಸ್ಥಳ – ನಿವೇಶನ – ಆಟದ ಮೈದಾನ– ಖಾತೆ – ಕಂದಾಯ ಕಟ್ಟಿದ ರಶೀದಿ ಇವುಗಳನ್ನು ಶೇಖರಿಸಿ ಜೋಪಾನವಾಗಿಟ್ಟುಕೊಳ್ಳಬೇಕು ಹಾಗೂ ಇದರ ಪರಿಶೀಲನೆ ಕಾಲ ಕಾಲಕ್ಕೆ ಮಾಡಬೇಕು.
7. ಹೆಚ್ಚುವರಿ ಬೈಸಿಕಲ್ ವಿತರಣೆ ಆಗಬಾರದು
8. ಉಳಿದ ಸಮವಸ್ತ್ರವನ್ನು ಸರಿಯಾಗಿ ಪ್ಯಾಕ್‌ನಲ್ಲಿ ಇಡತಕ್ಕದ್ದು
9. ಎಲ್ಲಾ ಶಾಲಾ ಮಕ್ಕಳು ಆಧಾರ್ ಕಾರ್ಡ್ ಹೊಂದಿರಬೇಕು

10. ಹೆಚ್.ಆರ್.ಎಂ.ಎಸ್. ಅಪ್‌ಡೇಟ್ ಆಗಬೇಕು

11. ಹೆಚ್.ಆರ್.ಎಂ.ಎಸ್. ಜೊತೆಗೆ ಆಧಾರ್ ನಂಬರ್ ಲಿಂಕ್ ಮಾಡಬೇಕು

12. ಉಪನಿರ್ದೇಶಕರು ಪ್ರತಿ ತಿಂಗಳು ಹೆಚ್.ಆರ್.ಎಂ.ಎಸ್ ಹಾಗೂ ತಾಲ್ಲೂಕುವಾರು ಅದಾಲತ್‌ನ್ನು ನಡೆಸಬೇಕು

13. ವಿಷಯ ಪರಿವೀಕ್ಷಕರು ಮತ್ತು ಶಿಕ್ಷಣ ಸಂಯೋಜಕರು ಶಾಲೆಗಳಿಗೆ ಭೇಟಿ ನೀಡಿದಾಗ ಖುದ್ದು ತರಗತಿಗಳಲ್ಲಿ ಕುಳಿತು ಕನಿಷ್ಠ 45 ನಿಮಿಷಗಳ ಕಾಲ ಪಾಠವನ್ನು ಗಮನಿಸಬೇಕು.

14. ಶಿಕ್ಷಣ ಕ್ಷೇತ್ರದ ಹಿರಿಯ ಅಧಿಕಾರಿಗಳಿಗೆ ಶಾಲೆಗಳಿಗೆ ಭೇಟಿ ನೀಡುವಾಗ ಅದು ಔಪಚಾರಿಕವಾಗಿರದೆ ಸಮಯೋಚಿತ ಶಿಸ್ತುಬದ್ಧ ಅರ್ಥಪೂರ್ಣ ವಿದ್ಯಾರ್ಥಿ ಮುಖಿಯಾಗಿ ಪಾಠ-ಪ್ರವಚನಗಳ ಕ್ರಿಯಾತ್ಮಕ ಬೆಳವಣಿಗೆಗೆ ಸಹಕಾರಿಯಾಗಿರಬೇಕು.

15. ಸರ್ಕಾರಿ ಶಾಲೆಗಳಿಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಈ ಸಂದಿಗ್ದ ಕಾಲದಲ್ಲಿ ಅಧಿಕಾರಿಗಳು ನೌಕರರು ಹೆಚ್ಚು ಎಚ್ಚರಿಕೆಯಿಂದ, ಜವಾಬ್ದಾರಿಯಿಂದ, ಕರ್ತವ್ಯ ಪ್ರಜ್ಞೆಯಿಂದ, ಸದ್ವಿವೇಕದಿಂದ ನಡೆದುಕೊಳ್ಳಲೇಬೇಕಾದ ಮಾರ್ಗವನ್ನು ತುಳಿಯದೆ ಅನ್ಯದಾರಿಯಿಲ್ಲ ಎಂಬ ಅಂಶಗಳೊಂದಿಗೆ ಶಿಕ್ಷಣ ಅದಾತ್‌ನ್ನು ಮುಕ್ತಾಯಗೊಳಿಸಲಾಯಿತು.

ಅಂತಿಮವಾಗಿ ಸಭೆಯಲ್ಲಿ ಹಾಜರಿದ್ದ ಮಂಡ್ಯ ಉಪನಿರ್ದೇಶಕರು ಎಲ್ಲರಿಗೂ ವಂದನೆಗಳನ್ನು ಹೇಳುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

23/9/15

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು.